ಬದ್ಧರಾಗಿದ್ದೇವೆ. ಪ್ರಚಲಿತ ವಿಭಿನ್ನ ಮಾರಾಟ ಪದ್ಧತಿ, ಪೇಟೆಗೆ, ಮಾರುಕಟ್ಟೆಗೆ ಬೇಕಾಗುವ ನಿಯತಕಾಲಿಕೆಗಳ ಸಂಬಂಧ, ಇಡೀ ರಾಜ್ಯದ ತುಂಬಾ ಏಕ ರೂಪವಾಗಬೇಕು, ಈ ಪ್ರಕ್ರಿಯೆಯನ್ನೂ ಕೂಡ ಪ್ರಾರಂಭಿಸಿದ್ದೇವೆ. ಇದಕ್ಕೆ ಆರು ತಿಂಗಳ ಕಾಲ ಸಮಯ ಬೇಕಾಗುತ್ತದೆ. ಆರು ತಿಂಗಳ ಒಳಗಡೆ ಈ ಎರಡೂ ಕೆಲಸಗಳನ್ನು ನಾವು ಪೂರ್ಣಗೊಳಿಸುತ್ತೇವೆಂದು ತಮಗೆ ತಿಳಿಸಲಿಚ್ಚಿಸುತ್ತೇನೆ.

ಶ್ರೀ ಎ. ರಾಮದಾಸ್ : ಅಧ್ಯಕ್ಷರೆ ನನ್ನದು ಇದಕ್ಕೆ ಸಂಬಂಧಪಟ್ಟಹಾಗೆ ಒಂದು ಉಪ ಪ್ರಶ್ನೆ ಕೇಳಲಿಚ್ಚಿಸುತ್ತೇನೆ.

ಅಧ್ಯಕ್ಷರು : ಈಗಾಗಲೇ ಎರಡು ಗಂಟೆಗಳ ಕಾಲ ಚರ್ಚೆ ನಡೆಸಿದ್ದೇವೆ. ನಾನು 12-45ಕ್ಕೆ ಕೇಂದ್ರದಿಂದ ಸಮಿತಿ ಬಂದಿರುವುದರಿಂದ ಹೋಗಬೇಕಾಗಿದೆ. ಮುಂದಿನ ಪ್ರಶ್ನೆ ಮಾನ್ಯ ಜಗದೀಶ್ ಶೆಟ್ಟರ್‌ರವರೇ ಕೇಳಿ.

ಶ್ರೀ ಎ. ರಾಮದಾಸ್ : ರೈತರ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ನಿರ್ಮಾಣ ಮಾಡಿರುವ ಎ.ಪಿ.ಎಂ.ಸಿ.ಗಳು ಏನಾಗಿವೆ ಎಂಬುದರ ಬಗ್ಗೆ ನಾನು ಹೇಳುತ್ತೇನೆ. ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಮೈಸೂರಿನಲ್ಲಿ ನಿರ್ಮಿಸಿರುವ ಎ.ಪಿ.ಎಂ.ಸಿ. ಯಲ್ಲಿ, ಐದು ವರ್ಷಗಳ ಅವಧಿಯಲ್ಲಿ ನೀವು ಆಜ್ಞೆ ಮಾಡಿದ್ದರೂ ಕೇವಲ ಶೇಕಡ 30 ರಷ್ಟು ರೈತರು ಮಾತ್ರ ಹೋಗುತ್ತಿದ್ದಾರೆ. ಇನ್ನುಳಿದ 70 ಭಾಗ ಹಳೆಯ ಮಾರ್ಕೆಟಿನಲ್ಲಿ ವ್ಯವಹಾರ ಮಾಡುತ್ತಿದ್ದಾರೆ. ಇದನ್ನು ನೀವು ಯಾವಾಗ ಸರಿ ಮಾಡುತ್ತೀರಿ? ಇದರಿಂದಾಗಿ ರೈತರಿಗೆ ಬಹಳ ಸಮಸ್ಯೆಯಾಗುತ್ತಿದೆ. ಇದಕ್ಕೆ ತಾವು ಉತ್ತರ ಕೊಡಬೇಕು.

ಶ್ರೀ ಆರ್. ಬಿ. ತಿಮ್ಮಾಪೂರ್ : ಮೈಸೂರಿನಲ್ಲಿ ಇನ್ನೂ ಪೂರಕವಾದ ಕೆಲಸಗಳು ಬಾಕಿ ಇವೆ. ಯಾವುದೇ ವ್ಯಾಪಾರವನ್ನು ತತ್‌ಕ್ಷಣ ಸ್ಥಳಾಂತರಿಸುವುದು ಕಷ್ಟಸಾಧ್ಯ. ಅದಕ್ಕೆ ಬೇಕಾಗಿರುವ ಎಲ್ಲಾ ಪೂರಕವಾದ ಕೆಲಸಗಳನ್ನು ತಕ್ಷಣವೇ ಮಾಡಿ ಮುಗಿಸಿ ಆದಷ್ಟು ಬೇಗ ಮೈಸೂರಿಗೆ ಶಿಫ್ಟ್ ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸದಸ್ಯರು ನಮ್ಮ ಕಷ್ಟವನ್ನು ಅರ್ಥ ಮಾಡಿಕೊಳ್ಳಬೇಕು, ನೀವು ಈ ರೀತಿ ಎಲ್ಲದಕ್ಕೂ ವಿವರಣೆ ಕೇಳಿದರೆ ಸದನ ನಡೆಸುವುದು ಕಷ್ಟವಾಗುತ್ತದೆ. ಮುಂದಿನ ಪ್ರಶ್ನೆ ಮಾನ್ಯ ಜಗದೀಶ್ ಶೆಟ್ಟರ್‌ರವರೇ ತಾವು ಕೇಳಿ.

ರಾಜ್ಯದಲ್ಲಿನ ಸಹಕಾರ ಎಣ್ಣೆ ಗಿರಣಿಗಳು

570 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಎಲ್ಲಾ ವಲಯ (ಜಂಟಿ, ಖಾಸಗಿ, ಸಹಕಾರಿ, ಸರ್ಕಾರಿ) ಎಣ್ಣೆ ಗಿರಣಿಗಳಾಗುವುವ?
ವಿವರ ನೀಡಿ.

ಅ) *ಇವುಗಳ ಉತ್ಪಾದನಾ ಸಾಮರ್ಥ್ಯ ಎಷ್ಟು? (ಕಾರ್ಖಾನೆವಾರು ವಿವರ ನೀಡಿ)*

ಇ) *1999-2000ನೇ ಸಾಲಿನಲ್ಲಿ ಈ ಕಾರ್ಖಾನೆಗಳು ಉತ್ಪಾದಿಸಿದ ವಿವಿಧ ಬಗೆಯ ಎಣ್ಣೆಯ ಪ್ರಮಾಣವೆಷ್ಟು?*

ಈ) *1999-2000ನೇ ಸಾಲಿನಲ್ಲಿ ಇವುಗಳು ಅನುಭವಿಸಿದ ಲಾಭ/ ಅಥವಾ ನಷ್ಟ ಎಷ್ಟು? (ಕಾರ್ಖಾನೆವಾರು ವಿವರ ನೀಡುವುದು)*

ಉ) *ದಿನಾಂಕ 31-3-2000ಕ್ಕೆ ನಷ್ಟದಲ್ಲಿರುವ ಕಾರ್ಖಾನೆಗಳ ಕ್ರೋಢೀಕೃತ ನಷ್ಟ ಎಷ್ಟು? ವಿವರ ನೀಡಿ.*

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :

ಅ) ಸಹಕಾರಿ ವಲಯಗಳಲ್ಲಿ ಕೆಳಕಂಡ ಎಣ್ಣೆ ಗಿರಿಣಿಗಳಿವೆ.

1. ಒಕ್ಕಲುತನ ಹುಟ್ಟುವಳಿ ಸಂಸ್ಕರಣ ಸಹಕಾರಿ ಸಂಘ ನಿಯಮಿತ, ಸಂಕೇಶ್ವರ.
2. ಮಲಪ್ರಭಾ ಸಹಕಾರಿ ಎಣ್ಣೆ ಗಿರಣಿ ನಿಯಮಿತ, ನರಗುಂದ.
3. ರೈತರ ಸಹಕಾರಿ ಎಣ್ಣೆ ಗಿರಣಿ ನಿಯಮಿತ, ಬಿಂಕದಕಟ್ಟೆ.
4. ದಿ ಗದಗ ಕೋ ಆಪರೇಟಿವ್ ಆಯಿಲ್ ಮಿಲ್ಸ್ ಲಿ; ಗದಗ (ಸಮಾಪನೆಯಲ್ಲಿದೆ)
5. ಪ್ರಾದೇಶಿಕ ಎಣ್ಣೆ ಬೀಜ ಬೆಳೆಗಾರರ ಸಹಕಾರಿ ಸಂಘಗಳ ಒಕ್ಕೂಟ ನಿಯಮಿತ, ಹೊಸಪೇಟೆ.
6. ಪ್ರಾಥಮಿಕ ಎಣ್ಣೆ ಬೀಜ ಬೆಳೆಗಾರರ ಸಹಕಾರಿ ಸಂಘಗಳ ಒಕ್ಕೂಟ, ನಿಯಮಿತ, ರಾಯಚೂರು.
7. ಕರ್ನಾಟಕ ಸಹಕಾರ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳ ನಿಯಮಿತ, (ಎಣ್ಣೆ ಸಂಕೀರ್ಣ, ದಾವಣಗೆರೆ)

ಆ) *1. ಒಕ್ಕಲುತನ ಹುಟ್ಟುವಳಿ ಸಂಸ್ಕರಣ ಸಹಕಾರಿ ಸಂಘ ನಿ, ಸಂಕೇಶ್ವರ.*

2570 ಕಿಲೋ ಗ್ರಾಮ್ಸ್ (ಎಂಟು ತಾಸಿನ ಪಾಳಿಗೆ)
(ಈ ಸಂಸ್ಥೆ ಕಳೆದ 15 ವರ್ಷಗಳಿಂದ ಸ್ಥಗಿತಗೊಂಡಿದೆ)

2. ಮಲಪ್ರಭಾ ಸಹಕಾರಿ ಎಣ್ಣೆ ಗಿರಣಿ ನಿಯಮಿತ, ನರಗುಂದ.

	ಉತ್ಪಾದನಾ ಸಾಮರ್ಥ್ಯ ಪ್ರತಿ ದಿನಕ್ಕೆ
1. ಹತ್ತಿ ಬೀಜ ಸಂಸ್ಕರಣ	80 ಮೆಟ್ರಿಕ್ ಟನ್ನುಗಳು
2. ಸೂರ್ಯಕಾಂತಿ ಬೀಜ ಸಂಸ್ಕರಣ	80 ಮೆಟ್ರಿಕ್ ಟನ್ನುಗಳು
3. ಶೇಂಗಾ ಬೀಜ ಸಂಸ್ಕರಣ	80 ಮೆಟ್ರಿಕ್ ಟನ್ನುಗಳು

4.	ಎಣ್ಣೆ ತೆಗೆಯುವ ಯಂತ್ರ	100 ಮೆಟ್ರಿಕ್ ಟನ್ನುಗಳು
5.	ಎಣ್ಣೆ ಸಂಸ್ಕರಣ	50 ಮೆಟ್ರಿಕ್ ಟನ್ನುಗಳು
6.	ಶೇಂಗಾ ಹಿಂಡಿ ಸಂಸ್ಕರಣ	120 ಮೆಟ್ರಿಕ್ ಟನ್ನುಗಳು.

3. *ರೈತರ ಸಹಕಾರಿ ಎಣ್ಣೆ ಗಿರಣಿ ನಿಯಮಿತ, ಬಿಂಕದಕಟ್ಟೆ*

1.	ಶೇಂಗಾ ಒಡೆಯುವ ಯಂತ್ರಗಳು-2	80 ಮೆಟ್ರಿಕ್ ಟನ್ನುಗಳು
2.	ಎಣ್ಣೆ ತೆಗೆಯುವ ಯಂತ್ರಗಳು -1	100 ಮೆಟ್ರಿಕ್ ಟನ್ನುಗಳು
3.	ಶೇಂಗಾ ಹಿಂಡಿ ಸಂಸ್ಕರಣ ಯಂತ್ರಗಳು -1	100 ಮೆಟ್ರಿಕ್ ಟನ್ನುಗಳು
4.	ಎಣ್ಣೆ ಸಂಸ್ಕರಣ ಯಂತ್ರಗಳು -1	20 ಮೆಟ್ರಿಕ್ ಟನ್ನುಗಳು.

4. *ಗದಗ ಸಹಕಾರಿ ಎಣ್ಣೆ ಗಿರಣಿ ನಿಯಮಿತ, ಗದಗ.*

1.	ಹತ್ತಿಕಾಳ ಎಕ್ಸ್‌ವೆಲ್ಲರ್	125 ಮೆಟ್ರಿಕ್ ಟನ್ನುಗಳು
2.	ಹತ್ತಿಕಾಳ ಸಂಸ್ಕರಣ	150 ಮೆಟ್ರಿಕ್ ಟನ್ನುಗಳು
3.	ಸಾವಲೆಂಟ್ ಪ್ಲಾಂಟ್	70 ಮೆಟ್ರಿಕ್ ಟನ್ನುಗಳು
4.	ನ್ಯೂಟ್ರಲೈಜರ್	30 ಮೆಟ್ರಿಕ್ ಟನ್ನುಗಳು

5. *ಪ್ರಾಥಮಿಕ ಎಣ್ಣೆ ಬೀಜ ಬೆಳೆಗಾರರ ಸಹಕಾರಿ ಸಂಘಗಳ ಒಕ್ಕೂಟ ನಿ, ಹೊಸಪೇಟೆ.*

1. ಪ್ರತಿ ದಿನಕ್ಕೆ 250 ಮೆಟ್ರಿಕ್ ಟನ್ಸ್ ಬೀಜಗಳ ಸಂಸ್ಕರಣ
2. ಪ್ರತಿ ದಿನಕ್ಕೆ 100 ಮೆಟ್ರಿಕ್ ಟನ್ಸ್ ಸಾಲ್ವೆಂಟ್ ಎಕ್ಸಾಟ್ರಾಕ್ಷನ್
3. ಪ್ರತಿ ದಿನಕ್ಕೆ 50 ಮೆಟ್ರಿಕ್ ಟನ್ಸ್ ರಿಫೈನರಿ

6. *ಪ್ರಾಥಮಿಕ ಎಣ್ಣೆ ಬೀಜ ಬೆಳೆಗಾರರ ಸಹಕಾರಿ ಸಂಘಗಳ ಒಕ್ಕೂಟ ನಿ, ರಾಯಚೂರು.*

1. ಪ್ರತಿ ದಿನಕ್ಕೆ ಒಂದಕ್ಕೆ 100 ಮೆಟ್ರಿಕ್ ಟನ್ಸ್ ಎಣ್ಣೆ ಬೀಜಗಳ ಸಂಸ್ಕರಣೆ
2. ಪ್ರತಿ ದಿನಕ್ಕೆ 60 ಮೆಟ್ರಿಕ್ ಟನ್ಸ್ ಸಾಲ್ವೆಂಟ್ ಎಕ್ಸಾಟ್ರಾಕ್ಷನ್.
3. ಪ್ರತಿ ದಿನಕ್ಕೆ 100 ಮೆಟ್ರಿಕ್ ಟನ್ಸ್ ಕಾಟನ್ ಪ್ರಿಪರೇಟರಿ
4. ಪ್ರತಿ ದಿನಕ್ಕೆ 20 ಮೆಟ್ರಿಕ್ ಟನ್ಸ್ ರಿಫೈನರಿ.

7) *ಕರ್ನಾಟಕ ಸಹಕಾರಿ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳಿ ನಿಯಮಿತ, ದಾವಣಗೆರೆ ಎಣ್ಣೆ ಸಂಕೀರ್ಣ.*

1. ಪ್ರತಿ ದಿನಕ್ಕೆ 50.00 ಮೆಟ್ರಿಕ್ ಟನ್ ಎಣ್ಣೆ ಬೀಜಗಳನ್ನು ಸಂಸ್ಕರಿಸಲಾಗುತ್ತದೆ.

ಇ) 1) ಒಕ್ಕಲುತನ ಹುಟ್ಟುವಳಿ ಸಂಸ್ಕರಣ ಸಹಕಾರ ಸಂಘ ನಿ, ಸಂಕೇಶ್ವರ. ಈ ಸಂಸ್ಥೆಯು 15 ವರ್ಷಗಳಿಂದ ಸ್ಥಗಿತಗೊಂಡಿದೆ.

2) ಮಲಪ್ರಭಾ ಸಹಕಾರಿ ಎಣ್ಣೆ ಗಿರಣಿ ನಿ, ನರಗುಂದ.

1. ಹತ್ತಿಬೀಜ ಎಣ್ಣೆ	567 ಮೆಟ್ರಿಕ್ ಟನ್ನುಗಳು
2. ಸೋಯಾಬೀನ್ ಎಣ್ಣೆ	1476 ಮೆಟ್ರಿಕ್ ಟನ್ನುಗಳು
3. ಸೂರ್ಯಕಾಂತಿ ಎಣ್ಣೆ	165 ಮೆಟ್ರಿಕ್ ಟನ್ನುಗಳು

3) ರೈತರ ಸಹಕಾರಿ ಎಣ್ಣೆ ಗಿರಣಿ ನಿ, ಬಿಂಕದಕಟ್ಟೆ

1. ಶೇಂಗಾ ಎಣ್ಣೆ ಸಂಸ್ಕರಣ	855.264
2. ಸಾಲ್ವೆಂಟ್ ಪ್ರಾಂಟ್‌ನಲ್ಲಿ ಸಾಲ್ವೆಂಟ್ ಎಣ್ಣೆ	80.736
3. ಶುದ್ಧೀಕರಿಸಿದ ಸಾಲ್ವೆಂಟ್ ಶೇಂಗಾ ಎಣ್ಣೆ	57.765

4) ಗದಗ ಸಹಕಾರಿ ಎಣ್ಣೆ ಗಿರಣಿ ನಿ, ಗದಗ (ಸಮಾಪನೆಯಲ್ಲಿದೆ).

5) ಪ್ರಾದೇಶಿಕ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘಗಳ ಒಕ್ಕೂಟ ನಿ, ಹೊಸಪೇಟೆ

ಶೇಂಗಾ ಎಣ್ಣೆ 2022.57 ಮೆಟ್ರಿಕ್ ಟನ್ನುಗಳು

6) ಪ್ರಾದೇಶಿಕ ಎಣ್ಣೆ ಬೀಜ ಬೆಳೆಗಾರರ ಸಹಕಾರಿ ಸಂಘಗಳ ಒಕ್ಕೂಟ ನಿ, ರಾಯಚೂರು.

ಶೇಂಗಾ ಎಣ್ಣೆ 1894.90 ಮೆಟ್ರಿಕ್ ಟನ್ನುಗಳು

7) ಕರ್ನಾಟಕ ಸಹಕಾರಿ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳ ನಿ, ಎಣ್ಣೆ ಸಂಕೀರ್ಣ, ದಾವಣಗೆರೆ.

ಶೇಂಗಾ ಎಣ್ಣೆ 758.28 ಮೆಟ್ರಿಕ್ ಟನ್ನುಗಳು.

ಈ)

	ಲಾಭ	ಹಾನಿ
	(ಲಕ್ಷ ರೂಪಾಯಿಗಳಲ್ಲಿ)	
1. ಒಕ್ಕಲುತನ ಹುಟ್ಟುವಳಿ ಸಂಸ್ಕರಣ ಸಹಕಾರ ಸಂಘ (ನಿ), ಸಂಕೇಶ್ವರ	0.49	-
2. ಮಲಪ್ರಭಾ ಸಹಕಾರಿ ಎಣ್ಣೆ ಗಿರಣಿ ನಿ, ನರಗುಂದ	-	488.90
3. ರೈತರ ಸಹಕಾರಿ ಎಣ್ಣೆ ಗಿರಿಣಿ ನಿ, ಬಿಂಕದಕಟ್ಟೆ	-	93.08

4.	ಗದಗ ಸಹಕಾರಿ ಎಣ್ಣೆ ಗಿರಣಿ ನಿ, ಗದಗ -	1.15
5.	ಪ್ರಾಥಮಿಕ ಎಣ್ಣೆಬೀಜ ಬೆಳೆಗಾರರ ಸಹಕಾರ ಸಂಘಗಳ ಒಕ್ಕೂಟ ನಿ, ಹೊಸಪೇಟೆ -	12.60
6.	ಪ್ರಾಥಮಿಕ ಎಣ್ಣೆಬೀಜ ಬೆಳೆಗಾರರ ಸಹಕಾರ ಸಂಘಗಳ ಒಕ್ಕೂಟ ನಿ, ರಾಯಚೂರು -	406.24
7.	ಕರ್ನಾಟಕ ಸಹಕಾರ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳ ನಿ, ಬೆಂಗಳೂರು, ಎಣ್ಣೆ ಸಂಕೀರ್ಣ, ದಾವಣಗೆರೆ -	118.41

		ಕ್ರೋಢೀಕೃತ ಹಾನಿ
ಊ)		
1.	ಒಕ್ಕಲುತನ ಹುಟ್ಟುವಳಿ ಸಂಸ್ಕರಣ ಸಹಕಾರಿ ಸಂಘ ನಿ, ಸಂಕೇಶ್ವರ	0.53
2.	ಮಲಪ್ರಭಾ ಸಹಕಾರಿ ಎಣ್ಣೆ ಗಿರಣಿ ನಿ, ನರಗುಂದ	2915.97
3.	ರೈತರ ಸಹಕಾರಿ ಎಣ್ಣೆ ಗಿರಣಿ ನಿ, ಬಿಂಕದಕಟ್ಟೆ	227.84
4.	ಗದಗ ಸಹಕಾರಿ ಎಣ್ಣೆ ಗಿರಣಿ ನಿ, ಗದಗ	835.10
5.	ಪ್ರಾದೇಶಿಕ ಎಣ್ಣೆಬೀಜ ಬೆಳೆಗಾರರ ಸಹಕಾರ ಸಂಘಗಳ ಒಕ್ಕೂಟ ನಿ, ಹೊಸಪೇಟೆ	2478.82
6.	ಪ್ರಾದೇಶಿಕ ಎಣ್ಣೆಬೀಜ ಬೆಳೆಗಾರರ ಸಹಕಾರಿ ಸಂಘಗಳ ಒಕ್ಕೂಟ ನಿ, ರಾಯಚೂರು	1167.04
7.	ಕರ್ನಾಟಕ ಸಹಕಾರಿ ಎಣ್ಣೆ ಬೀಜ ಬೆಳೆಗಾರರ ಮಹಾ ಮಂಡಳಿ ನಿ, ಎಣ್ಣೆ ಸಂಕೀರ್ಣ, ದಾವಣಗೆರೆ	940.39

ಶ್ರೀ ಜಗದೀಶ್ ಶೆಟ್ಟರ್ : ನಾನು ಕೇಳಿದ (ಆ) ಪ್ರಶ್ನೆಗೆ ಮಾನ್ಯ ಸಚಿವರು ತಮಗೆ ಸಂಬಂಧಪಟ್ಟ ಕೆಲವು ಉದಾಹರಣೆಗಳನ್ನು ಕೊಟ್ಟಿದ್ದಾರೆ. ಇಲ್ಲಿ ಸುದೀರ್ಘವಾದ ಉತ್ತರ ಇದೆ. ಇಲ್ಲಿರುವ ಸಹಕಾರಿ ಎಣ್ಣೆ ಗಿರಣಿಗಳು ಬಹುತೇಕ ಎಲ್ಲಾ ನಷ್ಟದಲ್ಲಿವೆ. ನಾನು ಕೆಲವೊಂದು ಉದಾಹರಣೆಗಳನ್ನು ಕೊಡುತ್ತೇನೆ. ಅವರು ಒದಗಿಸಿರುವ (ಊ)ಗೆ ಉತ್ತರದಲ್ಲಿ ಈ ಮಾಹಿತಿಯಿದ್ದು, ಇಷ್ಟೊಂದು ಪ್ರಮಾಣದಲ್ಲಿ ಕ್ರೋಢೀಕೃತ ನಷ್ಟವಾಗುವುದಕ್ಕೆ ಏನು ಕಾರಣ? ಈ ನಷ್ಟ ಎಷ್ಟು ವರ್ಷಗಳಿಂದ ಇದೆ? ಈ ಎಣ್ಣೆ ಗಿರಣಿಗಳು ಲಾಸ್ ಆಗದ ರೀತಿಯಲ್ಲಿ ಸರಿಯಾದ ದಿಕ್ಕಿನಲ್ಲಿ ಹೋಗುವುದಕ್ಕೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಂಡಿದೆಯೋ ಅಥವಾ ಇಲ್ಲವೋ ಎನ್ನುವ ಬಗ್ಗೆ ಸ್ಪಷ್ಟೀಕರಣವನ್ನು ಪುನರು ಜೀವನ ಮಾಡುವಂತಹ ವಿಚಾರ ಸರ್ಕಾರಕ್ಕೆ ಏನಾದರೂ ಇದೆಯೇ? ಇದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟೀಕರಣವನ್ನು ನೀಡಬೇಕು.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಈ 7 ಸಂಸ್ಥೆಗಳು ಏನಿವೆ, ಇವುಗಳಿಂದ 86 ಕೋಟಿ ರೂಗಳಷ್ಟು ಲಾಸ್ ಆಗಿದೆ ಎಂಬುದರ ಬಗ್ಗೆ ಈಗಾಗಲೇ ಉತ್ತರವನ್ನು ಒದಗಿಸಿದ್ದೇನೆ. ಈ ರೀತಿ ನಷ್ಟವಾಗುವುದಕ್ಕೆ ಕಾರಣವೇನೆಂದರೆ, ಆಯಿಲ್ ಸೆಕ್ಟಾರ್‌ನಲ್ಲಿ ಇದರ ಬಗ್ಗೆ ಕೇಂದ್ರ ಸರ್ಕಾರದ ಪಾಲಿಸಿ ವಿಚಾರ ಬಹಳಷ್ಟು ಇದೆ. ಇದನ್ನು ಸರಿ ಮಾಡುವುದಕ್ಕೆ ಆಗುತ್ತದೆಯೋ ಎಂಬ ಬಗ್ಗೆ ಯೋಚನೆಯನ್ನು ಮಾಡಬೇಕು. ಇದನ್ನು ಸರಿ ಮಾಡುವುದಕ್ಕೆ ಯಾವುದಾದರೂ ಸಂಸ್ಥೆಗಳು ಹಣವನ್ನು ಕೊಡುತ್ತೇವೆಂದು ಮುಂದಕ್ಕೆ ಬರಬೇಕು. ಸದ್ಯಕ್ಕೆ ಈ ಪಾಲಿಸಿಯ ವಿಚಾರ ವ್ಯತ್ಯಾಸವಿರುವುದರಿಂದ ಯಾವ ಸಂಸ್ಥೆಗಳು ಮುಂದಕ್ಕೆ ಬರುತ್ತಿಲ್ಲ. ಇದರ ಬಗ್ಗೆ ನಾವು ಇದನ್ನು ಯಾವರೀತಿ ರಿವ್ಯೂ ಮಾಡಬೇಕೆಂದು ಒಂದು ಸ್ಟಡಿಯನ್ನು ಮಾಡಿಸುತ್ತಿದ್ದೇವೆ. ಬಹುಶಃ ಅವರು ನಮಗೆ ಒಂದು ವರದಿಯನ್ನು ಕೊಟ್ಟಮೇಲೆ ಅದನ್ನು ಯಾವ ರೀತಿ ಸರಿ ಮಾಡುವುದಕ್ಕೆ ಸಾಧ್ಯವೆಂದು ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಸೆಂಟ್ರಲ್ ಗೌರ್ನಮೆಂಟ್ ವಿಚಾರದ ಬಗ್ಗೆ ಮಾನ್ಯ ಸಚಿವರು ಹೇಳಿದರು. ಇವರು ಎಲ್ಲದಕ್ಕೂ ಸೆಂಟ್ರಲ್ ಗೌರ್ನಮೆಂಟ್ ಪಾಲಿಸಿಯನ್ನು ತೆಗೆದುಕೊಂಡು ಬಂದಿದ್ದಾರೆ. ಇದು ಒಟ್ಟಾರೆ ಲಾಸ್, ಇದು ಎಷ್ಟು ವರ್ಷದ್ದು ಎಂದು ನಾನು ಪ್ರಶ್ನೆಯನ್ನು ಕೇಳಿದ್ದೆ, ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡಲಿಲ್ಲ. ಇದು ಒಂದು ವರ್ಷದ ಲಾಸ್ ಎಂದು ಹೇಳಿದರೆ, ಅದಕ್ಕೆ ನನ್ನ ಅಡ್ಡಿಯಿಲ್ಲ. ಅದು 5-10 ವರ್ಷ ಅಥವಾ ಪ್ರತಿ ವರ್ಷ ಸೆಂಟ್ರಲ್ ಗೌರ್ನಮೆಂಟ್ ಪಾಲಿಸಿಯಿಂದ ಲಾಸ್ ಆಗುವಂತಹದ್ದು, ಅಥವಾ ಅಲ್ಲಿ ಮಿಸ್ ಮ್ಯಾನೇಜ್‌ಮೆಂಟ್ ಆಯಿತೋ, ಏನಾದರೂ ಅವ್ಯವಹಾರವಾಯಿತೋ, ಇದರ ಬಗ್ಗೆ ಅವರಿಗೆ ಸ್ಪೆಸಿಫಿಕ್ಕಾಗಿ ಕಂಡುಬಂದಿದೆಯೋ ಹೇಗೆ? ಸರ್ಕಾರ ಸಹಕಾರಸಂಘಗಳ ಬಗ್ಗೆ ವಿಚಾರವನ್ನು ಮಾಡಬೇಕಾಗುತ್ತದೆ. ಅದರ ಬಗ್ಗೆ ತಾವು ಸ್ಪೆಸಿಫಿಕ್ಕಾಗಿ ಹೇಳಿ ಎಂದು ನಾನು ಕೇಳುತ್ತಿರುವುದು. ಇವತ್ತು ಸೆಂಟ್ರಲ್ ಗೌರ್ನಮೆಂಟ್ ಪಾಲಿಸಿ ಈ ರೀತಿ ಇದೆ, ಅದರಿಂದ ನಮಗೇನು ಮಾಡುವುದಕ್ಕಾಗುವುದಿಲ್ಲ, ಹಾಗಾದರೆ ಆ ಸಹಕಾರ ಸಂಘದ ತಪ್ಪೇನು ಇಲ್ಲವೋ ಹೇಗೆ? ಎಲ್ಲವೂ ಸರಿ ಇದ್ದು ಪಾಲಿಸಿ ಹೀಗೆ ಆಗಿದೆಯೋ ಏನು? ಇದನ್ನು ಸ್ಪಷ್ಟ ಮಾಡಲಿ.

ಶ್ರೀ ಡಿ.ಕೆ. ಶಿವಕುಮಾರ್ : ಇಲ್ಲಿ ನಡೆದಿರುವ ಸಂಗತಿಗಳು ಎಲ್ಲವೂ ಸರಿ ಇದೆಯೆಂದು ಹೇಳುವುದಕ್ಕೆ ನಾನು ತಯಾರಿಲ್ಲ, 86 ಕೋಟಿ ರೂಗಳಷ್ಟು ಲಾಸ್ ಆಗಬೇಕಾದರೆ ಮಿಸ್‌ಮ್ಯಾನೇಜ್‌ಮೆಂಟ್ ಇತ್ಯಾದಿ ಕಾರಣಗಳು ಸೇರಿಕೊಂಡಿರುತ್ತದೆ. ಪ್ರತಿ ವರ್ಷ ಏನೇನು ಲಾಸ್ ಆಗಿದೆ ಎನ್ನುವ ಬಗ್ಗೆ ತಮಗೆ ಪಟ್ಟಿಯನ್ನು ಕೊಟ್ಟಿದ್ದೇನೆ. ಒಟ್ಟು 31-3-2000 ರವರೆಗೆ ಎಷ್ಟು ಲಾಸ್ ಇದೆ ಎಂದು ತಾವು ಕೇಳಿದಿರಿ, ಆ ಸಂಘಗಳು ಸ್ಥಾಪನೆಯಿಂದ ಇಲ್ಲಿಯವರೆಗೆ ಇಷ್ಟು ಲಾಸ್ ಆಗಿದೆ ಎಂದು ಹೇಳಿದ್ದೇನೆ. ತಮಗೆ ಪ್ರತ್ಯೇಕವಾಗಿ ಪ್ರತಿ ವರ್ಷ ಎಷ್ಟು ಇದೆ, ಯಾವ ಸೆಕ್ಟಾರ್‌ನಲ್ಲಿದೆ ಇತ್ಯಾದಿ ವಿವರಗಳನ್ನು ಬೇಕಾದರೆ ಕಳುಹಿಸಿಕೊಡುತ್ತೇನೆ.

ಶ್ರೀ ಎ.ಬಿ. ಪಾಟೀಲ್ : ನನ್ನ ಕ್ಷೇತ್ರದಲ್ಲಿ ಬರುವ ಒಕ್ಕಲುತನ ಹುಟ್ಟುವಳಿ ಸಂಸ್ಕರಣ ಸಹಕಾರ ಸಂಘ 15 ವರ್ಷಗಳಿಂದ ಇದೆ ಎಂದು ಹೇಳಿದ್ದಾರೆ. 1999-2000ನೇ ಸಾಲಿನಲ್ಲಿ 49,000 ರೂಪಾಯಿಗಳು ಲಾಭ ಬಂದಿದೆ ಎಂದು ಹೇಳಿದ್ದಾರೆ. ಆ ಲಾಭ ಸಂಸ್ಥೆಗೆ ಹೇಗೆ ಬಂತು?

ಶ್ರೀ ಡಿ.ಕೆ. ಶಿವಕುಮಾರ್ : ಆಗ ಉಳಿದುಕೊಂಡಂತಹ 49,000 ರೂಪಾಯಿಗಳನ್ನೇ ಲಾಭವೆಂದು ತೋರಿಸಿಕೊಳ್ಳಲಾಗಿದೆ.

ಶ್ರೀ ಜಗದೀಶ್ ಶೆಟ್ಟರ್ : ಸಹಕಾರ ಸಂಘಗಳು ಎಣ್ಣೆ ಬೀಜಗಳನ್ನು ಶೇಕಡ 5ರಷ್ಟು ಖರೀದಿ ಮಾಡುತ್ತಾರೆ. ಸರ್ಕಾರಕ್ಕೆ ಅವರು ಶೇಕಡ 60ರಷ್ಟು ತೆರಿಗೆಯನ್ನು ತುಂಬುತ್ತಾರೆ. ಆದರೆ ಖಾಸಗಿಯವರು ಶೇಕಡ 95ರಷ್ಟು ಎಣ್ಣೆಬೀಜಗಳನ್ನು ಖರೀದಿ ಮಾಡುತ್ತಾರೆ, ಆದರೆ ಅವರು ಕೇವಲ ಶೇಕಡ 35ರಷ್ಟು ತೆರಿಗೆಯನ್ನು ಸರ್ಕಾರಕ್ಕೆ ತುಂಬುತ್ತಾರೆ. ಇದರಲ್ಲಿ ವ್ಯತ್ಯಾಸವಿದೆ. ಈ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಬೇಕು. ಈ ಎಣ್ಣೆಕ್ಷೇತ್ರ ಇದೆಯಲ್ಲಾ ಅದು ಖಾಸಗಿ ಇರಬಹುದು ಅಥವಾ ಸರ್ಕಾರದ್ದು ಇರಬಹುದು, ಇದು ಬಹಳ ತೊಂದರೆಯಲ್ಲಿದೆ, ಇದಕ್ಕೆ ಪುನರ್‌ಜ್ಜೀವನ ಕೊಡಲು ಸರ್ಕಾರ ಏನಾದರೂ ಕ್ರಮವನ್ನು ತೆಗೆದುಕೊಳ್ಳದೆ ಇದ್ದರೆ ರಾಜ್ಯದಲ್ಲಿರುವಂತಹ ಎಣ್ಣೆ ಕಾರ್ಖಾನೆಗಳು ಬಂದ್ ಆಗುತ್ತವೆ. ಇದನ್ನೇ ಅವಲಂಬಿಸಿರುವಂತಹ ಸಾವಿರಾರು ಜನರು ನಿರುದ್ಯೋಗಿಗಳಾಗುತ್ತಾರೆ. ಈ ಬಗ್ಗೆ ಸರ್ಕಾರ ಯಾವ ರೀತಿಯಾದ ಕ್ರಮವನ್ನು ತೆಗೆದುಕೊಳ್ಳುತ್ತದೆ ಎಂಬುದರ ಬಗ್ಗೆ ಮಾನ್ಯ ಸಚಿವರು ತಿಳಸಬೇಕು.

ಶ್ರೀ ಡಿ.ಕೆ. ಶಿವಕುಮಾರ್ : 15 ವರ್ಷಗಳಿಂದ ಒಕ್ಕಲುತನ ಹುಟ್ಟುವಳಿ ಸಂಸ್ಕರಣ ಸಹಕಾರ ಸಂಘ ನಿಂತುಹೋಗಿತ್ತು ಲಾಭ ಹೇಗೆ ಬಂತೆಂದು ಮಾನ್ಯ ಪಾಟೀಲ್‌ರವರು ಕೇಳಿದರು, ಈ ಗೌಡಾನನ್ನು ಬೇರೆಯವರಿಗೆ ಬಾಡಿಗೆಗೆ ಕೊಟ್ಟಿದ್ದಾರೆ, ಆ ಬಾಡಿಗೆ ಹಣವನ್ನೇ ಲಾಭವೆಂದು ತೋರಿಸಲಾಗಿದೆ. ಎರಡನೆಯದಾಗಿ ಈ ಎಣ್ಣೆಯ ಕ್ಷೇತ್ರವೇನಿದೆ ನಮಗೆ ಉತ್ಪಾದನೆಯ ವೆಚ್ಚ ಏನಾಗುತ್ತದೆ, ಅದಕ್ಕಿಂತ ಹೊರಗಡೆಯಿಂದ ಆಮದುಮಾಡಿಕೊಳ್ಳುತ್ತಿರುವಂತಹ ಎಣ್ಣೆ ತುಂಬಾ ಕಡಿಮೆ ಬೆಲೆಗೆ ಸಿಗುತ್ತದೆ. ಈಗಿರತಕ್ಕಂತಹ ಪರಿಸ್ಥಿತಿಯಲ್ಲಿ ಹೊಸದಾಗಿ ಉತ್ಪಾದನೆ ಮತ್ತು ಮಾರ್ಕೆಟಿಂಗ್, ಮಾಡಲು ತೊಂದರೆಯಾಗುತ್ತಿದೆ, ಫೈನಾನ್ಸಿಂಗ್ ಏಜೆನ್ಸಿ ಕೂಡ ಇದು ಎಕನಾಮಿಕಲಿ ವೈಯಬಲ್ ಅಲ್ಲಿ ಎಂದು ಯಾರು ಮುಂದಕ್ಕೆ ಬರುತ್ತಿಲ್ಲ. ನಾವು ನೌಕರರ ದೃಷ್ಟಿಯಿಂದ, ಸಂಸ್ಥೆಗಳ ದೃಷ್ಟಿಯಿಂದ ಯಾವ ರೀತಿ ಸ್ಪಿನ್ನಿಂಗ್ ಮಿಲ್ ಹಾಗೂ ಆಯಿಲ್ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ವರದಿಯನ್ನು ತರಿಸಿಕೊಂಡು ಯಾವ ರೀತಿಯಾಗಿ ಅದನ್ನು ಪುನಶ್ಚೇತನಗೊಳಿಸಬೇಕೋ ಆ ರೀತಿ ಖಂಡಿತವಾಗಿಯೂ ಮಾಡುತ್ತೇನೆ.

ಅಧ್ಯಕ್ಷರು : ತಡಿಹಿಡಿಯಲಾದ ಪ್ರಶ್ನೆ, ಶ್ರೀ ಪಿ.ಹೆಚ್. ಪೂಜಾರ್‌ರವರೆ ಕೇಳಿ.

ಶ್ರೀ ಪಿ.ಹೆಚ್. ಪೂಜಾರ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿಲ್ಲ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ : ಅಧ್ಯಕ್ಷರೆ, ಇದಕ್ಕೆ ಕಾಲಾವಕಾಶವನ್ನು ಕೇಳಲಾಗಿದೆ.

ಅಧ್ಯಕ್ಷರು ; ತಡೆಹಿಡಿಯಲಾದ ಈ ಪ್ರಶ್ನೆಯನ್ನು ಮುಂದಿನ ಶುಕ್ರವಾರ ತೆಗೆದುಕೊಳ್ಳೋಣ. ಈಗ ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹೆಚ್. ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, 38ನೇ ಪಟ್ಟಿಯಲ್ಲಿ ಲಿಖಿತ ಮೂಲಕ ಉತ್ತರಿಸುವ 109 ಪ್ರಶ್ನೆಗಳ ಪೈಕಿ 50 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.